ಅವು ಸ್ಥಗಿತವಾಗಿ ಬಿದ್ದು ಅಸಹಾಯಕವಾಗಿ ನಿಂತಂತೆ ಸೊರಗಿದ್ದವು. ನೋಡುವವರು ಎಂದು ಕೆಲವರನ್ನು ಇರಿಸಿದ್ದು ಹೌದಾದರೂ ಸ್ವಂತ ಊರಿಗೆ, ಮನೆಗೆ ಅತಿಥಿಯಂತೆ ಹೋಗಿ ಬರಬೇಕಾದ ನಾಜೂಕಾದ ಸ್ಥಿತಿ ಇತಿಹಾಸವೂ ಆಗಿ ನಿಂತಿದ್ದು, ವರ್ತಮಾನದಲ್ಲೂ ವಿಸ್ತಾರಗೊಳ್ಳುತ್ತಲೇ ಹೋಗುತ್ತಿರುವುದು ವಿಚಿತ್ರವಾದ ತಳಮಳವನ್ನು ಸೃಷ್ಟಿಸುತ್ತಿತ್ತು. ಹಾಗಾದರೆ, ಇದಕ್ಕೆ ಆಗಬೇಕಾದ ಉಪಾಯವೇನು? ಕಾಯಕಲ್ಪದ ದೃಷ್ಟಿಯಿಂದ ಯಾವ ಹೆಜ್ಜೆಗಳನ್ನು ಇರಿಸಬೇಕು ಎಂಬುದು ತಿಳಿಯದಾಗಿತ್ತು. ಏಕಾಏಕಿ ಹಾಗೆ ಮಾರಾಟ ಮಾಡಿಬಿಡುವುದೂ ಸೂಕ್ತವಾಗದು. ಯಾವುದಕ್ಕೂ ಅಣ್ಣ ಬಂದಾಗ ಮಾತನಾಡಬೇಕು. ಫೋನಿನಲ್ಲಿ ಮಾತನಾಡಲು ಏನು ಅಡ್ಡಿಗಳು ಎಂದು ವಾಮನನಿಗೆ ಅನಿಸಿದರೂ, ಅಣ್ಣನಿಗೆ ಅದು ಮನಸ್ಸಿಲ್ಲ ಎಂಬುದು ವೇದ್ಯವಾಗುತ್ತಿತ್ತು. "ಹೌದು, ಮಾತನಾಡಲು ಅಡ್ಡಿಗಳೇನೂ ಇಲ್ಲ. ಆದರೆ, ಬಂದಾಗ ಮಾತನಾಡೋಣವೋ ವಾಮನ" ಎಂದು ಅಣ್ಣ ಸದಾ ಹೇಳುತ್ತಿದ್ದ ಫೋನಿನಲ್ಲಿ. ಅಣ್ಣ ತಮ್ಮಂದಿರ ನಡುವೆ ಯಾವ ಮಾತುಗಳೂ ದುರಾಸೆಯ ಮಾತುಗಳಾಗಿ ಅಸ್ತಿತ್ವ ಕಂಡುಕೊಳ್ಳಕೂಡದು. ಈ ಮಕ್ಕಳೂ ವಯಸ್ಸಿಗೆ ಬಂದವುಗಳಲ್ಲ ಎಂದು ಹೇಳುವ ಹಾಗೂ ಇದ್ದಿರಲಿಲ್ಲ. ಟೋಕಿಯೊದಲ್ಲಿ ಇರುವ, ಅಲ್ಲೇ ಹುಟ್ಟಿ ಬೆಳೆದ ಅಣ್ಣನ ಮಕ್ಕಳು ಊರಿಗೆ ಬಂದು ಏನನ್ನು ನಿಭಾಯಿಸಬಲ್ಲವು? ಈಗ ತನ್ನ ಮಕ್ಕಳೆ ಯಾವ ಮುತುವರ್ಜಿಯೊಂದಿಗೆ, ವ್ಯಾವಹಾರಿಕ ನೈಪುಣ್ಯಗಳೊಂದಿಗೆ ಗಿಣಿಪುರದಲ್ಲಿರುವ ಆಸ್ತಿ, ಮನೆ ಮತ್ತು ಹಿತ್ತಲುಗಳನ್ನು ನಿರ್ವಹಿಸಬಲ್ಲವು ಎಂಬುದು ವಾಮನನಿಗೆ ಯಾಕೋ ತಲ್ಲಣ ತರುತ್ತಿದ್ದವು. ಗಿಣಿಪುರದ ವಿಚಾರಗಳೆಲ್ಲವೂ ಒಂದು ರೀತಿಯಲ್ಲಿ ಬ್ರಹ್ಮಕಪಾಲದ ಹಾಗೆ ತನ್ನ ಬೊಗಸೆಗೇ ಅಂಟಿಕೊಂಡ ಭಾರದಂತೆ ಸಮೀಕರಣ ಹಾಕಿಕೊಂಡು ವಿಜೃಂಭಿಸುತ್ತಿವೆ ಎಂದೇ ಅನಿಸುತ್ತಿತ್ತು.



ಇಷ್ಟಕ್ಕೂ ಅಣ್ಣ ಬಂದಾಗಲೂ ಹಾಗೆ ಹೀಗೆ ಎಂದು ಅವನ ರಜೆಯ ದಿನಗಳು ಮುಗಿಯುತ್ತಿದ್ದವೇ ವಿನಾ ಯಾವುದನ್ನೂ ನೇರವಾಗಿ ಕುಳಿತು, ನಿರುಮ್ಮಳವಾಗಿ ಮಾತನಾಡಲು ಆಗಲಿಲ್ಲ. ನಿರೀಕ್ಷೆಗಿಂತ ಮೊದಲೇ ಅಪ್ಪ ನಾಗೇಶಭಟ್ಟ ತೀರ್ಥಪುರಾಣಿಕರು ಜೀವನದ ವ್ಯಾಪಾರ ಮುಗಿಸಿದ್ದರು. ಎದೆಯಲ್ಲಿ ನೋವು ಎಂಬುದನ್ನು ಅಂದು ಸ್ಪಷ್ಟವಾಗಿ ಅಪ್ಪ ಹೇಳಿದರಂತೆ. ಆ ಕ್ಷಣದ ಸತ್ಯ ಇಷ್ಟನ್ನೇ ನೆವವಾಗಿಸಿಕೊಂಡು ಉರುಳು ಬೀಸಿತ್ತು. ಮೂರು ನಿಮಿಷಗಳಲ್ಲಿ ಖೇಲ್ ಖತಂ. ಅಂತೂ ಬೆಂಗಳೂರಿನಿಂದ ಧಾವಿಸಿ ಬಂದು, ವಾಮನ ಅಣ್ಣನ ಅನುಪಸ್ಥಿತಿಯಲ್ಲೇ ಶವ ಸಂಸ್ಕಾರ ಮುಗಿಸಿದ್ದ. ಮೂರನೇ ದಿನಕ್ಕೆ ಅಣ್ಣ ಜಗದೀಶ ಟೋಕಿಯೊದಿಂದ ಬಂದ. ಅವನೂ ಅಪ್ಪನ ಸಾವಿನ ಕತೆ ಕೇವಲ ಕೇಳಿದ್ದೇ. ಅಂತೂ ಹುಟ್ಟಿದವರು ಬೆಳೆಯುತ್ತಾರೆ. ಸತ್ತವರು ನೆನಪಾಗಿ ಇರುತ್ತಾರೆ. ಇಷ್ಟೆಯೇ ಜೀವನ ಎಂಬ ವಿಚಾರ ಸದಾ ಹೊಯ್ದಾಡುತ್ತಾ ಇರುತ್ತದಲ್ಲವೇ ಎಂದು ವಾಮನ ತನಗೆ ತಾನೇ ನೂರಾರು ಬಾರಿ ಕೇಳಿಕೊಂಡಿದ್ದ. ಅಮ್ಮನ ವಿಷಯದಲ್ಲೂ ಹೀಗೇ ಆಯ್ತು. ಅಪ್ಪನ ಸಾವಿನ ಅನಂತರ ಕ್ಷಣಗಣನೆ ನಡೆಸಿದವಳಂತೆ, ಅವಸರಿಸಿದಳೋ ಎಂಬಂತೆ, ಹತ್ತೇ ತಿಂಗಳ ಅಂತರದಲ್ಲಿ ಅಮ್ಮನ ಅಂತ್ಯವೂ ಆಗಿತ್ತು. ಬೇಗನೆ ಅವಳನ್ನು ಬೆಂಗಳೂರಿಗೆ ಕರೆಸಿಕೊಳ್ಳುವ ತಯಾರಿಯಲ್ಲಿ ವಾಮನನೇನೋ ಇದ್ದ. ಒಮ್ಮೆ ಅಮ್ಮ ಟೋಕಿಯೊ ನೋಡಲು ಬರಲಿ ಎಂದು ಅಣ್ಣ ಜಗದೀಶನೂ ಆಸೆಪಟ್ಟಿದ್ದ. ಹಾಗೆ ನೋಡಿದರೆ ಅಪ್ಪ ಅಮ್ಮ ಇಬ್ಬರೂ ಜಪಾನಿಗೆ ಬರಲಿ ಎಂಬುದೂ ಅಣ್ಣ ಜಗದೀಶನ ಆಸೆ ಇತ್ತು. ಆದರೆ, ಅಪ್ಪನಿಗೆ ತೀರ್ಥಗಣಪತಿಯನ್ನು ಬಿಟ್ಟು ಊರಿಂದ ಕದಲಲು ಸಾಧ್ಯವಿರಲಿಲ್ಲ. ತೀರ್ಥಗಣಪತಿ ಆರಾಧಕರೂ, ಅರ್ಚಕರೂ ಆಗಿದ್ದರಿಂದಲೇ ತೇರು ಬೀದಿ ನಾಗೇಶ ಭಟ್ಟರಾಗಿದ್ದ ಅಪ್ಪ ತೀರ್ಥ ಪುರಾಣಿಕರು ಎಂದು ರೂಢನಾಮ ಗಳಿಸಿದ್ದರು. ನಾಗೇಶಭಟ್ಟರು ಅಂತ ಮೊದಲಿನಿಂದಲೂ ಅವರನ್ನು ತಿಳಿದವರು ಕರೆಯುತ್ತಿದ್ದುದೂ ಉಂಟು.